

ಚಿತ್ರ: ಈಶ್ವರ

ಸೋಮಾರಿತನ; ಹಲವರಿಗೆ ನಾಚಿಕೆ!

ಮೊದಲ ದಿನ ಅಂಗಡಿಯವನು 'ಮ್ಯಾಡಂ, ಕವರ್ ಕೊಡುವುದಿಲ್ಲ' ಎಂದಾಗ ನನಗೆ ನಾಚಿಕೆಯಾಯಿತು. ಮನೆಗೆ ಹೋದವಳೇ ಒಂದು ಬಟ್ಟೆ ಬ್ಯಾಗನ್ನು ಮಡಚಿ ಪರ್ಸ್‌ನಲ್ಲಿ ಇಟ್ಟುಕೊಂಡೆ. ಮತ್ತೊಮ್ಮೆ ಅದನ್ನು ತೆಗೆದುಕೊಂಡು ಹೋಗಲು ಮರೆಯಲಿಲ್ಲ. ಮತ್ತೆ ಅಂಗಡಿಗೆ ಹೋದಾಗ 'ಏನ್ರೀ, ಜನ ತರುತ್ತಿದ್ದಾರಾ ಬಟ್ಟೆ ಚೀಲ?' ಎಂದು ಕೇಳಿದರೆ, 'ಇಲ್ಲ ಮ್ಯಾಡಂ, ಎಲ್ಲೋ ಒಂದಿಬ್ಬರು ತರುತ್ತಾರೆ. ಕವರ್ ಕೊಡದಿದ್ದರೆ ಜಗಳಕ್ಕೇ ಬರುತ್ತಾರೆ. ಗಿರಾಕಿಗಳನ್ನು ಕಳೆದುಕೊಳ್ಳಲು ಇಷ್ಟವಿಲ್ಲದೆ ಕವರ್ ಕೊಡುತ್ತಲೇ ಇದ್ದೇವೆ' ಎಂದ! ನಗರ– ಹಳ್ಳಿಗಳೆನ್ನದೆ ಬೃಹದಾಕಾರವಾಗಿ ಬೆಳೆಯುತ್ತಿರುವ ಕಸದ ಸಮಸ್ಯೆಗೆ ಪರಿಹಾರವಿದ್ದರೂ, ನಾವು ನಿರ್ಲಕ್ಷ್ಯ ತಳೆದಿದ್ದೇವೆ.

ಶಿಕ್ಷಣದ ಬಗ್ಗೆ ಯೋಚಿಸಿದರೆ ಅಲ್ಲಿಯೂ ನಿರಾಶೆಯೇ! ಮಕ್ಕಳು ಬೆಳೆಯುತ್ತಿರುವ ಪರಿಸರ ಅವರಿಗೆ ಮಾನವೀಯತೆಯನ್ನು ಕಲಿಸುತ್ತಿಲ್ಲ. ವಿನಯಹೀನತೆ ಹೆಚ್ಚಿನವರಿಗೆ ದೊಡ್ಡಸ್ತಿಕೆ ಆಗಿದೆ. ರಚ್ಚೆ ಮಾಡಿ ತೊಂದರೆ ಕೊಡದೆ ಇರಲಿ ಎಂದು ಪೋಷಕರೇ ಮಕ್ಕಳ ಕೈಗೆ 'ಗಿಲಕಿ'ಯ ಬದಲು 'ಮೊಬೈಲು' ಇಡುತ್ತಿದ್ದಾರೆ. ಪ್ರೌಢಶಾಲೆಗೆ ಬರುವ ಹೊತ್ತಿಗೆ ಅವರು 'ನೋಡಬಾರದ್ದನ್ನು' ನೋಡುವಷ್ಟು ಪರಿಣತರಾಗದೆ ಇರುತ್ತಾರೆಯೇ? ಇನ್ನು ಮೊಬೈಲ್ ಮೆಸೇಜ್‌ಗಳ ಹಾವಳಿ, ಫೇಸ್‌ಬುಕ್ ಅವಾಂತರಗಳು; ಇನ್ನೊಂದೆಡೆ ಮಾಧ್ಯಮಗಳು– ಮುಖ್ಯವಾಗಿ ಸಿನಿಮಾ ರಂಗ ಮತ್ತು ಟೀವಿ ಜಾಹೀರಾತುಗಳು ಎಳೆಯರನ್ನು ವಿಷಚಕ್ರದಲ್ಲಿ ಸಿಲುಕಿಸುತ್ತಿವೆ. ಅಮೃತವೆಂದು ಹೇಳುತ್ತಾ ಒಳಗೆ ವಿಷವನ್ನೇ ತುಂಬಿ ನೀಡುತ್ತಿವೆ. ಇಂಥ ಪರಿಸರದಲ್ಲಿ ಬೆಳೆಯುವ ಮಕ್ಕಳು ದೊಡ್ಡವರಾದ ಮೇಲೆ ಯಾವ ರೀತಿಯ ನೈತಿಕ ಮೌಲ್ಯಗಳನ್ನು ಅನುಸರಿಸಲು ಸಾಧ್ಯ?

ಅಪ್ಪ– ಅಮ್ಮ –ಮಕ್ಕಳ ಮಧ್ಯೆ, ಅಣ್ಣ– ತಮ್ಮಂದಿರ ಮಧ್ಯೆ ಪರಸ್ಪರ ಕುಳಿತು ನಕ್ಕು, ನಲಿಯುವ; ಕಷ್ಟ–ಸುಖ ಹಂಚಿಕೊಳ್ಳುವ ಸನ್ನಿವೇಶಗಳು ಅಪರೂಪವಾಗುತ್ತಿವೆ. ತಮ್ಮ ಸಂಕಷ್ಟಗಳನ್ನು, ನೋವುಗಳನ್ನು ಅಪ್ಪ– ಅಮ್ಮನ ಬಳಿಯಲ್ಲಿ ಹೇಳಿಕೊಳ್ಳುವುದಕ್ಕಿಂತ ಹೆಚ್ಚಾಗಿ ಕೊಠಡಿಯ ಬಾಗಿಲು ಹಾಕಿಕೊಂಡು ಮನೆಯ ಹೊರಗಿನವರಾದ ಗೆಳೆಯನೋ, ಗೆಳತಿಯೋ ಅಥವಾ ಇಷ್ಟವಾದವರನ್ನೋ ವಿಶ್ವಾಸಕ್ಕೆ ತೆಗೆದುಕೊಂಡು ಗಂಟೆಗಟ್ಟಲೆ ಅವರೊಂದಿಗೆ ತೋಡಿಕೊಳ್ಳುವ ಪ್ರವೃತ್ತಿ ಎಳೆಯರಲ್ಲಿ ಹೆಚ್ಚಾಗುತ್ತಿದೆ.

ಅನ್ಯಾಯದ ವಿರುದ್ಧ ಹೋರಾಡುವ ಮನೋಭಾವ ಜನರಲ್ಲಿ ಪೂರ್ತಿ ಇಲ್ಲವಾಗಿದೆ ಎಂದಲ್ಲ. ಈಗಲೂ ನಮ್ಮಲ್ಲಿ ಪ್ರತಿಭಟನೆಗಳು ನಡೆಯುತ್ತವೆ. ಆದರೆ ನ್ಯಾಯ ಸಿಗುವುದಕ್ಕಿಂತ ಮುನ್ನವೇ ಆ ಪ್ರತಿಭಟನೆಗಳು ತಣ್ಣಗಾಗುತ್ತವೆ. ಜನ ಆವೇಶದಿಂದ ಪ್ರತಿಭಟಿಸುತ್ತಾ ನಾಲ್ಕು ದಿನ ಹೋರಾಡಿ, ಐದನೆಯ ದಿನ ಏನೂ ಆಗಿಲ್ಲವೆಂಬಂತೆ ಸುಮ್ಮನಾಗಿಬಿಡುತ್ತಾರೆ.

ಟಿ.ವಿ ಚಾನೆಲ್‌ಗಳು ಉಂಟು ಮಾಡುತ್ತಿರುವ ಅನಾಹುತಗಳು ಒಂದೆರಡಲ್ಲ. ದುಷ್ಕರ ಕ್ರಿಯೆಗಳನ್ನು ಪದೇ ಪದೇ ವೈಭವೀಕರಿಸಿ ತೋರಿಸುತ್ತಾರೆ. ಜತೆಗೆ ಟಿ.ವಿ ವಾಹಿನಿಗಳಲ್ಲಿ ಕುಳಿತು ಜ್ಯೋತಿಷಿಗಳು ಜನರ ಮನಸ್ಸಿನಲ್ಲಿ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಭವಿಷ್ಯದ ಬಗ್ಗೆ ಹೆದರಿಕೆಗಳನ್ನು ಹುಟ್ಟುಹಾಕುತ್ತಿದ್ದಾರೆ. ಒಂದಿಷ್ಟು ಕಂಟಕಗಳ ಹೆಸರು ಹೇಳಿ, ಅದಕ್ಕೆ ನಕ್ಷತ್ರ– ಗ್ರಹಗಳನ್ನು ಹೊಣೆ ಮಾಡಿ, ಜನರಲ್ಲಿ ಮೂಢನಂಬಿಕೆಗಳ ಬೀಜ ಬಿತ್ತುತ್ತಾರೆ. ಜನರನ್ನು ಹೆದರಿಸುವ ಬದಲು ಜ್ಯೋತಿಷಿಗಳೇ ಜನಗಳಿಗೆ, 'ಎಲ್ಲ ಒಳ್ಳೆಯದಾಗುತ್ತದೆ, ಪ್ರಯತ್ನ ಮುಂದುವರಿಸಿ' ಎಂದೆಲ್ಲ ಧೈರ್ಯ, ಸಮಾಧಾನಗಳನ್ನು ಸಕಾರಾತ್ಮಕವಾಗಿ ಹೇಳುವುದು ಏಕೆ ಸಾಧ್ಯವಿಲ್ಲ? ಬಡಜನರು ಎಷ್ಟೋ ದಿನಗಳಿಂದ ಕೂಡಿಟ್ಟ ಹಣವೆಲ್ಲಾ ಈ ವೃಥಾ ಪೂಜೆಗಳಿಗೆ ಖರ್ಚು ಮಾಡಿ ಇನ್ನಷ್ಟು ಸಂಕಷ್ಟಕ್ಕೆ ಒಳಗಾಗುತ್ತಾರೆ.

ಟಿ.ವಿಯಲ್ಲಿ ಬರುವ ಉತ್ತಮ ಕಾರ್ಯಕ್ರಮಗಳನ್ನು ಮಾತ್ರ ಮಕ್ಕಳು ಆಯ್ಕೆ ಮಾಡಿ ನೋಡುವಂತೆ ಅವರಿಗೆ ತರಬೇತಿ ನೀಡಬೇಕಿದೆ. ಅಮ್ಮ ಮನೆಯಲ್ಲಿ ಕೆಲಸದಲ್ಲಿ ನಿರತವಾಗಿದ್ದಾಗ ಪುಟ್ಟ ಮೊಬೈಲ್‌ನಲ್ಲಿ, ಲ್ಯಾಪ್‌ಟಾಪ್‌ನಲ್ಲಿ ಏನನ್ನು ನೋಡುತ್ತಿದ್ದಾನೆ ಎನ್ನುವುದು ಅಮ್ಮನಿಗೆ ಗೊತ್ತಿರಬೇಕು.

ಎಪ್ಪತ್ತು– ಎಂಭತ್ತರ ದಶಕದಲ್ಲಿ ಬಂದ ಸಿನಿಮಾ ಹಾಡುಗಳಲ್ಲಿ ಎಷ್ಟೊಂದು ನೀತಿಪಾಠಗಳು ಇರುತ್ತಿದ್ದವು. ಶಾಲೆಗಳಲ್ಲಿ ಆ ಹಾಡುಗಳನ್ನೇ ಮಕ್ಕಳು ವೇದಿಕೆಯ ಮೇಲೆ ಹತ್ತಿ ಹಾಡುವಾಗ ಸಂತೋಷದಿಂದ ಕಣ್ಣು ತುಂಬಿ ಬರುತ್ತಿದ್ದವು. ರೇಡಿಯೋದಲ್ಲಿ ಆ ಹಾಡುಗಳು ಬಂದರೆ ಮನೆಮಂದಿಯೆಲ್ಲ ಕಿವಿಯರಳಿಸಿ ಕೇಳುತ್ತಿದ್ದರು. ಈಗ ಎಷ್ಟೋ ಹಾಡುಗಳು ಬಂದಾಗ ವಿವಿಧ ವಯೋಮಾನದ ಕುಟುಂಬದ ಸದಸ್ಯರು ಒಟ್ಟಿಗೆ ಕೇಳುವುದೇ ಅಸಹ್ಯ ಎನ್ನಿಸುತ್ತದೆ. ಟಿ.ವಿ ಕಾರ್ಯಕ್ರಮಗಳೂ ಅಷ್ಟೆ– ಹರೆಯಕ್ಕೆ ಬಂದ ಮಕ್ಕಳ ಜತೆಗೆ ಹಿರಿಯರು ಕುಳಿತು ನೋಡುವಾಗ ಅನುಭವಿಸುವ ಮುಜುಗರ ಅಷ್ಟಿಷ್ಟಲ್ಲ.

ವ್ಯಕ್ತಿಗತ ಹಮ್ಮು ಬಿಮ್ಮುಗಳು ಮೇಲುಗೈ ಸಾಧಿಸುತ್ತಿರುವ, ವೈಯಕ್ತಿಕ ಪ್ರತಿಷ್ಠೆ, ಸ್ವಾರ್ಥಗಳೇ ಮುಖ್ಯ ಎಂದು ಮನುಷ್ಯ ಭಾವಿಸುವ ಕಾಲಘಟ್ಟದಲ್ಲಿ ನಾವಿದ್ದೇವೆ. ಸಮಷ್ಟಿಯಲ್ಲಿ 'ನಾವೆಲ್ಲ ಒಂದು' ಎನ್ನುವ ಹಿಂದೆ ಇದ್ದ ಭಾವ ಕಣ್ಮರೆಯಾಗುತ್ತಿದೆ. ಏನಾದರೂ ಅಹಿತಕರ ಘಟನೆಗಳು ನಡೆದರೆ. 'ನನಗೇನು? ನಾವೇನು ಮಾಡೋಕಾಗುತ್ತೆ?' ಎನ್ನುವ ಪ್ರಶ್ನೆಗಳೇ ಹೆಚ್ಚಾಗುತ್ತಿವೆ.

ಒಂದೆಡೆ ವೈಜ್ಞಾನಿಕವಾಗಿ ಅತ್ಯಂತ ವೇಗವಾಗಿ ಧಾವಿಸುತ್ತಿರುವ ಪ್ರಪಂಚ; ಇನ್ನೊಂದೆಡೆ ಅವೈಜ್ಞಾನಿಕ ವಿಚಾರಗಳು, ಅಂಧ ಶ್ರದ್ಧೆಗಳು, ಕುರುಡು ನಂಬಿಕೆಗಳು ವೇಗವಾಗಿ ವರ್ಧಿಸುತ್ತಿರುವುದು ಈ ಕಾಲದ ಅತಿದೊಡ್ಡ ವೈರುಧ್ಯ. ಈಗಲೂ ನಿಧಿಯ ಆಸೆಗಾಗಿ ಮಕ್ಕಳನ್ನು ಬಲಿಕೊಡುವ ಪ್ರಕರಣಗಳು ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ ಎಂದರೆ, ನಮ್ಮ ಸಮಾಜ ಎತ್ತ ಸಾಗುತ್ತಿದೆ?